**A**

SL. No. : R

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF**
**REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 29. 03. 2019 ] [ Date : 29. 03. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. 1909 ರಲ್ಲಿ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ರಚಿಸಲು ಕಾರಣ

   (A) ಮುಸ್ಲಿಂರಿಗಾಗಿ ಪ್ರತ್ಯೇಕ ಪ್ರಾತಿನಿಧ್ಯ ನೀಡಲು

   (B) ಯೂರೋಪಿಯನ್ನರಿಗೆ ಪ್ರತ್ಯೇಕ ಕ್ಷೇತ್ರ ರಚಿಸಲು

   (C) ಸಿಖ್‌ರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು

   (D) ಕ್ರೈಸ್ತರಿಗೆ ಕೆಲ ಸ್ಥಾನಗಳ ಮೀಸಲು ನೀಡಲು

2. ಮೊದಲನೆಯ ಆಂಗ್ಲೋ–ಮೈಸೂರು ಯುದ್ಧವನ್ನು ಕೊನೆಗೊಳಿಸಿದ್ದು

   (A) ಮೈಸೂರು ಒಪ್ಪಂದ (B) ಮದ್ರಾಸ್ ಒಪ್ಪಂದ

   (C) ಮಂಗಳೂರು ಒಪ್ಪಂದ (D) ಶ್ರೀರಂಗಪಟ್ಟಣ ಒಪ್ಪಂದ

3. 'ನ್ಯೂ ಇಂಡಿಯಾ' ವೃತ್ತ ಪತ್ರಿಕೆಯನ್ನು ಆರಂಭಿಸಿದವರು

   (A) ರಾಜಾ ರಾಮ್‌ಮೋಹನ ರಾಯ್ (B) ಮಹಾತ್ಮ ಗಾಂಧೀಜಿ

   (C) ಅನಿಬೆಸೆಂಟ್ (D) ದಯಾನಂದ ಸರಸ್ವತಿ

4. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿದ ವರ್ಷ

   (A) 1945 (B) 1950

   (C) 1947 (D) 1948

5. ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

   (A) ಅದು 15 ಖಾಯಂ ಸದಸ್ಯರನ್ನು ಹೊಂದಿದೆ

   (B) ಅದು ವಿಶ್ವಸಂಸ್ಥೆಯ ಸಚಿವ ಸಂಪುಟವಿದ್ದಂತೆ

   (C) ಅದು ಪ್ಯಾರಿಸ್‌ನಲ್ಲಿ ತನ್ನ ಕೇಂದ್ರ ಕಚೇರಿ ಹೊಂದಿದೆ

   (D) ಇತ್ತೀಚಿಗೆ ಭಾರತ ಖಾಯಂ ಸದಸ್ಯತ್ವ ಪಡೆದಿದೆ

6. 'ಕಾಣದ ಹಸಿವು' ಎಂದರೆ

(A) ಪೌಷ್ಠಿಕತೆ (B) ಅಪೌಷ್ಠಿಕತೆ

(C) ಶ್ರೀಮಂತರಲ್ಲಿ ಹಸಿವು (D) ಸಮತೋಲನ ಆಹಾರ

7. ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತವಾಗಿರಲು ಕಾರಣ

(A) ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ಉತ್ಪತ್ತಿಯಾಗಿದೆ

(B) ಕಡಿಮೆ ತೇವಾಂಶ ಸಂಗ್ರಹ ಸಾಮರ್ಥ್ಯ ಹೊಂದಿದೆ

(C) ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ

(D) ಸ್ಫಟಿಕ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ

8. ದಾಮೋದರ ನದಿಕಣಿವೆ ಯೋಜನೆಯ ನಿರ್ಮಾಣದಿಂದಾಗಿರುವ ಪರಿಣಾಮ

(A) ದಾಮೋದರ ನದಿಯು ಬಂಗಾಳದ ದುಃಖ ನದಿಯಾಗಿ ಉಳಿದಿಲ್ಲ

(B) ಭೂಕುಸಿತಗಳು ಹೆಚ್ಚಾಗಿವೆ

(C) ಬಲಿಷ್ಠ ಭೂಕಂಪನಗಳನ್ನು ಉಂಟುಮಾಡಿದೆ

(D) ಪ್ರಮುಖ ಕೈಗಾರಿಕಾ ಪ್ರದೇಶಗಳು ಮುಳುಗಡೆಯಾಗಿವೆ

9. ಪ್ರತ್ಯಕ್ಷ ತೆರಿಗೆಗೆ ಒಂದು ಉದಾಹರಣೆ

(A) ಮೌಲ್ಯವರ್ಧಿತ ತೆರಿಗೆ

(B) ಕೇಂದ್ರ ಅಬಕಾರಿ ತೆರಿಗೆ

(C) ಸ್ಟ್ಯಾಂಪ್ ಶುಲ್ಕ

(D) ಸೇವಾ ತೆರಿಗೆ

10. ಒಬ್ಬ ವ್ಯಕ್ತಿಯು 15 ಲಕ್ಷ ಬೆಲೆ ಬಾಳುವ ಕಾರನ್ನು ಕೊಂಡಿರುತ್ತಾನೆ. ಆ ಕಾರಿನಲಿ ಕೆಲವು ತೊಂದರೆಗಳಿದ್ದರೂ ಆ ಕಾರು ಕಂಪನಿಯವರು ಸರಿಯಾಗಿ ಸ್ಪಂದಿಸುತ್ತಿಲ್ಲ. ಆಗ ಆ ವ್ಯಕ್ತಿಯು ಯಾವ ವೇದಿಕೆ / ಆಯೋಗಕ್ಕೆ ದೂರು ಸಲ್ಲಿಸಬೇಕು ?

(A) ಜಿಲ್ಲಾ ಗ್ರಾಹಕರ ವೇದಿಕೆ

(B) ರಾಜ್ಯ ಗ್ರಾಹಕರ ಆಯೋಗ

(C) ರಾಷ್ಟ್ರೀಯ ಗ್ರಾಹಕರ ಆಯೋಗ

(D) ಅಂತರರಾಜ್ಯ ಗ್ರಾಹಕರ ವೇದಿಕೆ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 14 × 1 = 14

11. ಶುದ್ಧಿ ಚಳುವಳಿಯನ್ನು ಏಕೆ ಆರಂಭಿಸಲಾಯಿತು ?

12. ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ಏಕೆ ವಿರೋಧಿಸಿದರು ?

13. ಸರ್ದಾರ್ ವಲ್ಲಭಬಾಯಿ ಪಟೇಲ್‌ರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಏಕೆ ಕರೆಯಲಾಗಿದೆ ?

14. ಸರ್ಕಾರವು ಟಿಬೆಟಿಯನ್ ನಿರಾಶ್ರಿತರ ಸಮಸ್ಯೆಯನ್ನು ಹೇಗೆ ಪರಿಹರಿಸಿತು ?

15. ಅಮೆರಿಕಾದಲ್ಲಿ ಮೊದಲನೆಯ ಮಹಾಯುದ್ಧದ ನಂತರ ಕೃಷಿ ಉತ್ಪಾದನೆ ಕುಸಿಯಿತು. ಏಕೆ ?

16. ನಿಶ್ಶಸ್ತ್ರೀಕರಣ ಎಂದರೇನು ?

17. 'ದಿ ರಿಪಬ್ಲಿಕ್' ಪುಸ್ತಕವನ್ನು ಯಾರು ಬರೆದಿದ್ದಾರೆ ?

18. ದೇವದಾಸಿ ಪದ್ಧತಿಯು ಒಂದು ಅಮಾನವೀಯ ಅಭ್ಯಾಸ. ಏಕೆ ?

19. ಭಾರತದ ಯಾವ ರಾಜ್ಯವು ಅತೀ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ ?

20. ಭಾರತದ ಪೂರ್ವ ಕರಾವಳಿಯ ನದಿ ಮುಖಜ ಭೂಮಿಗಳಲ್ಲಿ ಕಂಡುಬರುವ ಕಾಡುಗಳಾವುವು ?

21. ಅಲ್ಯೂಮಿನಿಯಂಗೆ ನಿರ್ಮಾಣ ಕಂಪನಿಗಳಿಂದ ಹೆಚ್ಚಿನ ಬೇಡಿಕೆ ಇದೆ. ಏಕೆ ?

22. ಜನ ಸಾಂದ್ರತೆ ಎಂದರೇನು ?

23. 1993 ರಲ್ಲಿ ಸಂವಿಧಾನದ 73ನೇಯ ತಿದ್ದುಪಡಿ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು ?

24. ವಿಶ್ವ ಗ್ರಾಹಕ ದಿನಾಚರಣೆಯನ್ನು ಯಾವಾಗ ಆಚರಿಸಲಾಗುತ್ತದೆ ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 15 × 2 = 30

25. ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು. ಸ್ಪಷ್ಟೀಕರಿಸಿ.

26. ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸಿತ್ತು ?

27. ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಶೋಚನೀಯವಾಗಿತ್ತು. ಸಮರ್ಥಿಸಿ.

28. ಕೊಟ್ಟಿರುವ ಚಿತ್ರಕ್ಕೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

(a) ಚಿತ್ರದಲ್ಲಿರುವ ವ್ಯಕ್ತಿಯನ್ನು ಹೆಸರಿಸಿ.

(b) ಆ ವ್ಯಕ್ತಿಯು ಬರೆದಿರುವ ಕೃತಿಯನ್ನು ಹೆಸರಿಸಿ.



29. ಫ್ಯಾಸಿಸ್ಟ್‌ವಾದದ ಲಕ್ಷಣಗಳೇನು ?

***ಅಥವಾ***

ರಷ್ಯಾದ ಅಧ್ಯಕ್ಷರಾಗಿ ಲೆನಿನ್‌ರವರ ಸಾಧನೆಗಳೇನು ?

30. ಭಾರತವನ್ನು ವಿಶ್ವದ ಪ್ರಭಾವಶಾಲಿ ರಾಷ್ಟ್ರಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಏಕೆ ?

31. ಭಾರತ ಮತ್ತು ಚೀನಾಗಳ ನಡುವೆ ಗಡಿ ವಿವಾದವಿದ್ದರೂ ಕೂಡ ಅವುಗಳ ನಡುವಿನ ಸಂಬಂಧವನ್ನು ಹೇಗೆ ಉತ್ತಮಪಡಿಸಿಕೊಂಡಿವೆ ?

32. ದೊಂಬಿಯು ಒಂದು ಸಮಾಜ ಘಾತುಕ ಚಟುವಟಿಕೆ. ಏಕೆ ?

33. ಕೊಟ್ಟಿರುವ ದಕ್ಷಿಣ ಭಾರತದ ನಕ್ಷೆಯಲ್ಲಿ ಗುರುತಿಸಿರುವ ಸ್ವಾಭಾವಿಕ ವಿಭಾಗವನ್ನು ಹೆಸರಿಸಿ ಮತ್ತು ಅದರ ಯಾವುದಾದರೂ ಎರಡು ಆರ್ಥಿಕ ಪ್ರಾಮುಖ್ಯತೆಯನ್ನು ತಿಳಿಸಿ.



34. ಭಾರತದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಏಕೆ ?

35. ಕೃಷಿಯು ದ್ವಿತೀಯ ಮತ್ತು ತೃತೀಯ ವಲಯಗಳ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?

36. ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಅಭಾವ ಭಾರತದ ಒಂದು ಪ್ರಮುಖ ಸಮಸ್ಯೆಯಾಗಿದೆ. ಏಕೆ ?

37. ರಸ್ತೆ ಸಾರಿಗೆಯು ರೈಲು ಸಾರಿಗೆಗಿಂತ ಉತ್ತಮವಾಗಿದೆ. ಸ್ಪಷ್ಟೀಕರಿಸಿ.

38. ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ಮಾನವ ಅಭಿವೃದ್ಧಿ ಸೂಚ್ಯಂಕ ( HDI ) ದ ರಚನೆ ಅಗತ್ಯ. ವಿವರಿಸಿ.

39. ಜಾಗತೀಕರಣವು ಮಾನವನ ಆಹಾರ ಪದ್ಧತಿ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೇಗೆ ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಭಾರತದ ಚರಿತ್ರೆಯಲ್ಲಿ 18ನೇ ಶತಮಾನವನ್ನು 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದು ಸಮರ್ಥಿಸಿ.

***ಅಥವಾ***

ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಆಲೋಚನೆಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು. ಸಮರ್ಥಿಸಿ.

41. ಭಾರತದಲ್ಲಿ ನಿರುದ್ಯೋಗವು ಒಂದು ದೊಡ್ಡ ಸಮಸ್ಯೆಯಾಗಿ ಬೆಳೆದಿದೆ. ಏಕೆ ?

***ಅಥವಾ***

ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿ.

42. ಭಾರತದಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಜಾರಿಗೊಳಿಸಿರುವ ಕಾನೂನು ಕ್ರಮಗಳನ್ನು ವಿವರಿಸಿ.

***ಅಥವಾ***

ಸಂಘಟಿತ ದುಡಿಮೆ ವಲಯದ ಲಕ್ಷಣಗಳನ್ನು ವಿವರಿಸಿ.

43. ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳು ಹೇಗೆ ಸಹಾಯಕವಾಗಿವೆ. ವಿವರಿಸಿ.

***ಅಥವಾ***

ನೈಸರ್ಗಿಕ ಮತ್ತು ಮಾನವ ಶಕ್ತಿಗಳೆರಡೂ ಭೂಕುಸಿತಕ್ಕೆ ಹೇಗೆ ಕಾರಣವಾಗುತ್ತವೆಂದು, ವಿವರಿಸಿ.

44. ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಗಳೇನು ?

***ಅಥವಾ***

ಸಾರ್ವಜನಿಕ ವೆಚ್ಚದ ಗುರಿ / ಉದ್ದೇಶಗಳೇನು ?

45. ಉದ್ಯಮಿಯ ಕಾರ್ಯಗಳನ್ನು ಪಟ್ಟಿ ಮಾಡಿ.

***ಅಥವಾ***

ಬ್ಯಾಂಕಿನಲ್ಲಿ ಖಾತೆ ತೆರೆಯುವುದರಿಂದಾಗುವ ಉಪಯೋಗಗಳನ್ನು ಪಟ್ಟಿ ಮಾಡಿ.

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ* ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** 4

46. ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರು ಸಂಘಟಿಸಿದ ಪ್ರತಿಭಟನೆಗಳು ಪ್ರಮುಖವಾಗಿದ್ದವೆಂಬುದನ್ನು ವಿವರಿಸಿ.

VI. 47. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) ಇಂದಿರಾ ಕೋಲ್

b) ಕಾವೇರಿ ನದಿ

c) ದೆಹಲಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 47 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳೇನು ? 4